# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಎಸ್.ಸಿ.136/2024

ಅಸಾ : 01
ಚಾಸಾ : 05

ಸಾಕ್ಷಿದಾರರ ಹೆಸರು : ಕೃಷ್ಣಯ್ಯ ವಾಲೀಕಾರ

ತಂದೆಯ ಹೆಸರು : ಗೋವಿಂದಪ್ಪ

ವಯಸ್ಸು : 29 ವರ್ಷ

ಉದ್ಯೋಗ : ಗ್ರಾಮ ಆಡಳಿತಾಧಿಕಾರಿ

ವಾಸ ಸ್ಥಳ : ನಾಗನೂರು.

ದಿನಾಂಕ: **25/03/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ಸಾರ್ವಜನಿಕ ಅಭಿಯೋಜಕರಿಂದ: –**

1. ಕಳೆದ 8 ವರ್ಷಗಳಿಂದ ನಾನು ನಾಗನೂರು ಗ್ರಾಮದ ಗ್ರಾಮ ಆಡಳಿತಾಧಿಕಾರಿ ಎಂದು ಕೆಲಸ ನಿರ್ವಹಿಸುತ್ತಿದ್ದೇನೆ. ಚಾಸಾ-4 ಸಹ ಕಾಟೇನಹಳ್ಳಿ ಗ್ರಾಮದ ಗ್ರಾಮ ಆಡಳಿತಾಧಿಕಾರಿ ಎಂದು ಕೆಲಸ ಮಾಡುತ್ತಿದ್ದರು.

2. ಇಂದು ಹಾಜರಿರುವ 1 ರಿಂದ 3 ನೇ ಆರೋಪಿತರು ಗೊತ್ತು. ರಾಬರಿ ಪ್ರಕರಣದಲ್ಲಿ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನನಗೆ ಮತ್ತು ಚಾಸಾ-4 ರಿಗೆ ಕೇಳಿಕೊಂಡಿದ್ದರು. ದಿನಾಂಕ:21.08.2024 ರಂದು 1 ನೇ ಆರೋಪಿ ನಮ್ಮನ್ನು ಮತ್ತು ಪೊಲೀಸರನ್ನು ಹಾವೇರಿ ಶಹರ ಠಾಣೆಯಿಂದ ದೇವಿಹೊಸೂರಿನ ಒರ್ವ ಗೌರಮ್ಮ ಎನ್ನುವವರ ಮನೆ ಹತ್ತಿರ ಕರೆದುಕೊಂಡು ಹೋಗಿ ಒಂದು ಚಾಕು, ಒಂದು ರೆಡ್ ಜಾಕೆಟ್, ರಾಡು, ಓಪ್ಪೊ, ವಿವೋ ಮತ್ತು ಟೆಕ್ನೋ ಕಂಪನಿಯ ಒಂದೊಂದು ಮೊಬೈಲ್‌ಗಳನ್ನು ಮತ್ತು ಒಂದು ಬೈಕನ್ನು ಹಾಜರುಮಾಡಿದರು. ಬೈಕ ಸಂಖ್ಯೆ ಕೆಎ-15 ವಿ-8975 ಇತ್ತು.

3. ಈ ಮೇಲೆ ಹೇಳಿದ ಸ್ವತ್ತನ್ನು ಪೊಲೀಸರು ಜಪ್ತಿಮಾಡಿ ಪಂಚನಾಮೆ ತಯಾರಿಸಿ, ಪೋಟೋ ಪಡೆದು, ಸಹಿ ಪಡೆದರು. ಈಗ ತೋರಿಸಿದ ಪಂಚನಾಮೆ ಮೇಲೆ ಇರುವ ಸಹಿ ನನ್ನದೇ ಇದ್ದು, ಪಂಚನಾಮೆಯನ್ನು ನಿಪಿ-1 ಎಂದು ಹಾಗೂ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಕವರುಗಳ ಮೇಲೆ ಅಂಟಿಸಿದ ಚೀಟಿಗೆ ನನ್ನ ಸಹಿ ಇರುತ್ತದೆ. ಈಗ ತೋರಿಸಿದ 5 ಪೋಟೋಗಳು ಆ ದಿನ ಪಡದವೇ ಇದ್ದು, ಅವುಗಳನ್ನು ನಿಪಿ-2 ರಿಂದ ನಿಪಿ-6 ಎಂದು

ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನಾನು ಮತ್ತು ಚಾಸಾ-4 ಇರುತ್ತೇವೆ. ಆ ದಿನ ಜಪ್ತಿ ಮಾಡಲಾದ ಸ್ವತ್ತನ್ನು ಗುರುತಿಸಬಲ್ಲೆ. (ಸಾಕ್ಷಿಯನ್ನು ನ್ಯಾಯಾಲಯದ ಕಟ್ಟಡದಲ್ಲಿರುವ ವಾಹನವನ್ನು ನೋಡಿಕೊಂಡು ಬರಲು ಕಳಿಸಲಾಯಿತು.)

4. ಈಗ ನಾನು ನೋಡಿ ಬಂದ ವಾಹನ ಆ ದಿನ ಜಪ್ತಿಮಾಡಿದ್ದೇ ಇದ್ದು, ಅದನ್ನು ಮುಮಾ-1 ಎಂದು ಗುರುತಿಸಲಾಯಿತು.

5. ಈಗ ತೋರಿಸಲಾದ ಸ್ವತ್ತುಗಳು ಆ ದಿನ ಜಪ್ತಿಮಾಡಿದ್ದವೇ ಇರುತ್ತವೆ. ಟೆಕ್ನೋ ಮೊಬೈಲ್ ನ್ನು ಮುಮಾ-2, ಜರ್ಕಿನ್ ನ್ನು ಮುಮಾ-3, ಚಾಕುವನ್ನು ಮುಮಾ-4, ರಾಡನ್ನು ಮುಮಾ-5, ವಿವೋ ಮೊಬೈಲನ್ನು ಮುಮಾ-6 ಹಾಗೂ ಓಪ್ಪೋ ಮೊಬೈಲನ್ನು ಮುಮಾ-7 ಎಂದು ಗುರುತಿಸಲಾಯಿತು. ಈ ದಿನ ಹಾಜರಿರುವ ಆರೋಪಿತರೇ ನಮ್ಮನ್ನು ಹಾಗೂ ಪೊಲೀಸರನ್ನು ಕರೆದುಕೊಂಡು ಹೋಗಿ ಮುಮಾ-1 ರಿಂದ 7 ನ್ನು ಹಾಜರುಮಾಡಿದ್ದರು.

**ಪಾಟೀ ಸವಾಲುಃ 3 ನೇ ಆರೋಪಿ ಪರಃ ಶ್ರೀ ಡಿ.ಟಿ.ಬಿ. ವಕೀಲರಿಂದಃ–**

6. ಹಾವೇರಿ ತಹಶೀಲ್ದಾರರು ನನ್ನ ಮೇಲಾಧಿಕಾರಿಯಾಗಿದ್ದರು. ನಾನು ನನ್ನ ಕಛೇರಿ ಯಲ್ಲಿ ಕಛೇರಿ ಅವಧಿಯ ಚಲನ-ವಲನ ರಜಿಸ್ಟರ ಇಟ್ಟಿದ್ದೇನೆ. ಕಾರ್ಯಾಲಯದ ಅವಧಿಯಲ್ಲಿ ಹೊರ ಹೋಗುವಾಗ ಮತ್ತು ವಾಪಾಸು ಬಂದ ನಂತರ ರಜಿಸ್ಟರನಲ್ಲಿ ನಮೂದು ಮಾಡುತ್ತೇವೆ. ಈ ಪ್ರಕರಣದಲ್ಲಿ ಪೊಲೀಸರು ಪಂಚನಾಮೆಗೆ ಕರೆದ ಬಗ್ಗೆ ರಜಿಸ್ಟರನಲ್ಲಿ ನಮೂದು ಮಾಡಿಲ್ಲ. ಪೊಲೀಸರು ನನಗೆ ಲಿಖಿತ ನೋಟೀಸು ಕೊಟ್ಟಿಲ್ಲ. ಅದೇ ದಿನ ಬೆಳಿಗ್ಗೆ 10.30 ಕ್ಕೆ ಫೋನ ಕರೆ ಮಾಡಿ ತಿಳಿಸಿದ್ದರು. ಪೊಲೀಸರು ಪಂಚನಾಮೆಗೆ ಕರೆದ ಬಗ್ಗೆ ತಹಶೀಲ್ದಾರರಿಗೆ ಮೌಖಿಕವಾಗಿ ತಿಳಿಸಿ ಪರವಾನಿಗೆ ಪಡೆದೆ.

7. ಆ ದಿನ ಬೆಳಿಗ್ಗೆ 11.00 ಘಂಟೆಗೆ ನಾನು ಕಛೇರಿಯಿಂದ ಹೊರಟೆ. ನಾನು ಶಹರ ಠಾಣೆಗೆ ಬಂದಾಗ ಬೆಳಿಗ್ಗೆ 11.30 ಘಂಟೆಯಾಗಿತ್ತು. ಚಾಸಾ-4 ಮತ್ತು ನಾನು ಸೇರಿಯೇ ಪೊಲೀಸ ಠಾಣೆಗೆ ಬಂದೆವು. ಇಂದು ಹಾಜರಿರುವ ಆರೋಪಿತರನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎನ್ನುವುದು ಸುಳ್ಳು.

8. ಪೊಲೀಸ ಠಾಣೆಯಿಂದ ಪೊಲೀಸ ಜೀಪಿನಲ್ಲಿ 7-8 ಜನ ದೇವಿಹೊಸೂರಗೆ ಹೋದೆವು. ಸದರಿ ವಾಹನದ ಸಂಖ್ಯೆ ಕೆಎ-27 ಜಿ-414 ಇತ್ತು. ಠಾಣೆಯಿಂದ ಹೊರಟಾಗ 11.30 ಘಂಟೆಯಾಗಿತ್ತು. ದೇವಿಹೊಸೂರಿನ ಗೌರಮ್ಮ ಎನ್ನುವವರ ಗುರುತು ಮತ್ತು ವಿಳಾಸದ ದಾಖಲೆ ಗಳನ್ನು ನಾವು ಪರಿಶೀಲಿಸಿಲ್ಲ. ಸದರಿಯವರ ಮನೆಯ ಚೆಕ್ಕುಬಂದಿ ನೆನಪಿಲ್ಲ. 1 ನೇ ಆರೋಪಿ ಸದರಿ ಮನೆಯಿಂದ ಮುಮಾ-1 ರಿಂದ 7 ನ್ನು ಹಾಜರುಮಾಡಿದ. ಆ ಪೈಕಿ ಒಂದೊಂದು ಸ್ವತ್ತನ್ನು ಒಂದೊಂದು ಕಡೆಗೆ ಇಡಲಾಗಿತ್ತು. ಪಂಚನಾಮೆಯನ್ನು ಪೊಲೀಸರೇ ತಯಾರಿಸಿದರು. ನಿಪಿ-1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎನ್ನುವುದು ಸುಳ್ಳು. ಖಾಲಿ ಹಾಳೆಯ ಮೇಲೆ ಸಹಿ ಮಾಡಿದ್ದೇನೆ ಎನ್ನುವುದು ಸುಳ್ಳು.

9. ಸ್ವತ್ತನ್ನು ಜಪ್ತಿಮಾಡಿ ಕವರುಗಳಲ್ಲಿ ಹಾಕಲು ಪೊಲೀಸರೇ ಕವರುಗಳನ್ನು ತಂದಿದ್ದರು. ಮುಮಾ-2 ರಿಂದ 7 ರ ಮೇಲೆ ಇರುವ ಚೀಟಿಗಳ ಮೇಲೆ ದಿನಾಂಕ, ತಿಂಗಳು, ಸಮಯ ಇತ್ಯಾದಿ ಬರೆದಿಲ್ಲ ಎನ್ನುವುದು ನಿಜ. ಮುಮಾ-1 ರಿಂದ 7 ರಂತಹ ಸ್ವತ್ತು ಸಾಮಾನ್ಯವಾಗಿ ಸಿಗುತ್ತವೆ ಎನ್ನುವುದು ನಿಜ. ಮುಮಾ-1 ರ ಆರ್.ಸಿ. ಮಾಲೀಕರು ಯಾರು ಎಂಬುದನ್ನು ನಾನು ವಿಚಾರಿಸಿಲ್ಲ. ಪೊಲೀಸರೇ ನಿಪಿ-2 ರಿಂದ 6 ಪೋಟೋಗಳನ್ನು ಮೊಬೈಲ್ ಮೂಲಕ ಪಡೆದರು. ನಿಪಿ-2 ಮತ್ತು 3 ರಲ್ಲಿ ಲ್ಯಾಪಟ್ಯಾಪ ಹಿಡಿದುಕೊಂಡು ನಿಂತಿದ್ದು ಇರುತ್ತದೆ ಎನ್ನುವುದು ನಿಜ.

10. ಪೊಲೀಸರು ಪ್ರಕರಣಕ್ಕೆ ಅನುಕೂಲವಾಗುವಂತೆ ನಮ್ಮನ್ನು ನಿಲ್ಲಿಸಿ ಪೋಟೋ ಪಡೆದು ಸಹಿ ಪಡೆದರು ಎನ್ನುವುದು ಸುಳ್ಳು. ಮುಮಾ-1 ರಿಂದ 7 ನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎನ್ನುವುದು ಸುಳ್ಳು. ಪೊಲೀಸರ ಮತ್ತು ನನ್ನ ಮೇಲಾಧಿಕಾರಿ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಮುಮಾ-1 ರಿಂದ 7 ಪೊಲೀಸ ಠಾಣೆಯಲ್ಲಿ ಇದ್ದವು ಎನ್ನುವುದು ಸುಳ್ಳು. ಅವುಗಳನ್ನು ಆರೋಪಿತರು ಹಾಜರುಮಾಡಿಲ್ಲ ಎನ್ನುವುದು ಸುಳ್ಳು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರಃ ಶ್ರೀ ಎನ್.ಜಿ.ಎಚ್. ವಕೀಲರಿಂದಃ-**

11. ನಿಪಿ-1 ನ್ನು ತಯಾರಿಸಲು ನಾನು ಅಥವಾ ಚಾಸಾ-4 ಉಕ್ತಲೇಖನ ನೀಡಿಲ್ಲ.

(ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅನುಮೋದಿಸಿರುತ್ತಾರೆ.)

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.